


ವಿನಯಾ ಒಕ್ಕುಂದ

ಕಣ್ಣಾಯಿಸಿ ಆ ಮನೆಗಳತ್ತ ಇಣುಕುವ ಪುರಸೊತ್ತೂ ಇಲ್ಲದ ಭರ್ತಿ ಹರೆಯದ ದಿನಗಳವು. ಮಾಪಿಳ್ಳೆ ಯುವಕರು ಪಟ್ಟೆ ಲುಂಗಿ ಸುತ್ತಿಕೊಂಡು ಕಾಯಿ ಯಾಪಾರ, ಹಗ್ಗದ ಯಾಪಾರ, ಮಣ್ಣು ಮಸಿ ಅಂತ ನಮ್ಮ ದೋಣಿ ನಮ್ಮ ಬಸ್ಸುಗಳಲ್ಲಿದ್ದರೂ ಅವರು ಹೊಳೆಯ ಆ ಅಂಚು ನೋಡುತ್ತಿದ್ದರೆ ನಾವು ಈ ಅಂಚು ನೋಡುತ್ತ ಬೆಳೆದವರು. ಆಗಾಗ ಕಳ್ಳಿಬೇಲಿಯ ಗಂಡಿಯಲ್ಲಿ ಗೋಕರ್ಣದ ಕಲ್ಪನಾ ಟಾಕೀಸಿನ ಸಿನಿಮಾ ಪರದೆಯ ಮೇಲೆ ಮೂಡುವಂತಹ ಚೆಲುವೆಯರು ಫಳಕ್ಕನೇ ಮಿಂಚುತ್ತಿದ್ದರು. ಬುರ್ಖಾ ಅಂದರೆ ಊರು ಬಿಟ್ಟು ಊರಿಗೆ ಹೋಗುವಾಗ ಧರಿಸುವ ದಿರಿಸು ಆಗಿದ್ದರಿಂದ, ಆ ಹುಡುಗಿಯರ, ಹೆಂಗಸರ ಎಳೆ ಚಿಗುರಿನಂತಹ ಸೊಬಗು ಬೆಳಕಿನ ಕೋಲಿನಂತೆ ಹಾಯುತ್ತಿತ್ತು. ಮದರಂಗಿ ಕೆಂಪಿನ ಆ ಎಳೆಚಿಗುರು ಬಾಲೆಯರು ಕಂಡರೆ ಗಕ್ಕಾಗಿ ನಾವು ಹಾದಿಯ ಕಲ್ಲು ಎಡವಿ ಹೆಬ್ಬಟ್ಟು ಕೆತ್ತಿಕೊಂಡದ್ದೂ ಇದೆ. ಆಗೆಲ್ಲ ಹೊಟ್ಟೆಯೊಳಗೊಂದು ಹೊಟ್ಟೆಕಿಚ್ಚಿನ ಹೊಳೆ ಸೆಳವುಕ್ಕಿ ಇಳಿದ ಸಂಕಟವನ್ನು ಈಗ ಮುಚ್ಚಿಟ್ಟರಾದರೂ ಏನು? 'ತಂಗಿ, ಓದಿ ಕಲೆಕ್ಟರಾಗ್ಬೇಕು ಮಗಾ' ಎಂದು ಪರೀಕ್ಷೆಗೆ ಹೋಗುವಾಗ ಕೈಯೆತ್ತಿ ಪ್ರವಾದಿಯಂತೆ ಆಶೀರ್ವದಿಸುತ್ತಿದ್ದ ಗರ್ನಾಲು ಸಾಬರು ಕೂಡ ತಮ್ಮ ಹೊಟ್ಟೆಯ ಹೆಣ್ಮಕ್ಕಳನ್ನು ಯಾಕೆ ಶಾಲೆಗೆ ಕಳಿಸಲಿಲ್ಲವೋ? ಕಡೆಗೂ ತಿಳಿಯಲಿಲ್ಲ. ತಿಳಿದುಕೊಳ್ಳಬಹುದಾದ ಕಾಲದಲ್ಲಿ ನಾವೂ ಮುಗುಮ್ಮಾಗಿ ಉಳಿದುಬಿಟ್ಟೆವು.

ಆ ದಣಪೆ ಪಕ್ಕವೇ ಮಡಲಿನ ಮಾಡು ತಟ್ಟಿಯ ಮರೆಯಲ್ಲಿ ಕೂತು ಸಾಬರು ಗರ್ನಾಲು ಕಟ್ಟುತ್ತಿದ್ದರು. ನಾವದನ್ನು ಗರ್ನಾಲು ಸಾಬರ 'ಮದ್ದು ತಯಾರಿಕಾ ಘಟಕ' ಎಂದು



ಸೃಜನ್